No. of Printed Pages : **2**

# 45133

## B.A. I Semester (NEP) Degree Examination, March/April - 2022

## ಐಚ್ಛಿಕ ಕನ್ನಡ

## Paper No. DSC - I/1 - ಹಳೆಗನ್ನಡ ಸಾಹಿತ್ಯ ಚರಿತ್ರೆ

Time : 3 Hours Maximum Marks : 60

***ಸೂಚನೆ :*** *ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.*

### ವಿಭಾಗ – ಎ

**1.** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **10x1=10**

(a) ಕನ್ನಡದ ಮೊಟ್ಟಮೊದಲ ಲಭ್ಯ ಕೃತಿ ಯಾವುದು ?

(b) ಆರ್. ನರಸಿಂಹಾಚಾರ್ಯರು ಬರೆದ ಸಾಹಿತ್ಯ ಚರಿತ್ರೆಯ ಸಂಪುಟಗಳ ಹೆಸರೇನು ?

(c) ಕನ್ನಡದ ಮೊದಲ ಶಾಸನ ಯಾವುದು ?

(d) ಪಂಪನು ರಚಿಸಿದ ಎರಡು ಕೃತಿಗಳು ಯಾವುವು ?

(e) ರನ್ನ ರಚಿಸಿದ ಲೌಕಿಕ ಕಾವ್ಯ ಯಾವುದು ?

(f) ಚಂಪೂ ಕಾವ್ಯದ ಲಕ್ಷಣವೇನು ?

(g) ವಡ್ಡಾರಾಧನೆ ಕೃತಿಯ ಕರ್ತೃ ಯಾರು ?

(h) ಶಾಂತಿಪುರಾಣದ ಕರ್ತೃ ಯಾರು ?

(i) ಒಂದನೇ ನಾಗವರ್ಮನ ಕೃತಿಗಳನ್ನು ಹೆಸರಿಸಿರಿ.

(j) ಚಾವುಂಡರಾಯಪುರಾಣಕ್ಕಿರುವ ಇನ್ನೊಂದು ಹೆಸರೇನು ?

### ವಿಭಾಗ – ಬಿ

ಈ ಕೆಳಗಿನವುಗಳಲ್ಲಿ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿರಿ. **4x5=20**

**2.** ಕನ್ನಡ ಸಾಹಿತ್ಯ ಚರಿತ್ರೆಗಳ ಸಂಕ್ಷಿಪ್ತ ಪರಿಚಯ ಬರೆಯಿರಿ.

**3.** ಪಂಪ ಪೂರ್ವ ಯುಗದ ಮೌಖಿಕ–ಲಿಖಿತ ಪರಂಪರೆಯನ್ನು ಕುರಿತು ಬರೆಯಿರಿ.

**4.** ಜನ್ನ ಕವಿಯ ಮತ್ತು ಆತನ ಕೃತಿಗಳನ್ನು ಕುರಿತು ಬರೆಯಿರಿ.

**5.** ಪಂಪನ ವಿಕ್ರಮಾರ್ಜುನ ವಿಜಯಂ ಕುರಿತು ಪರಿಚಯಾತ್ಮಕವಾಗಿ ವಿವರಿಸಿರಿ.

**6.** ಪ್ರಾಚೀನ ಕನ್ನಡ ಸಾಹಿತ್ಯದ ಲೌಕಿಕ ಮತ್ತು ಆಗಮಿಕ ಕೃತಿಗಳನ್ನು ಕುರಿತು ಬರೆಯಿರಿ.

**7.** ಚಂಪೂ ಸಾಹಿತ್ಯದ ಲಕ್ಷಣ ಮತ್ತು ವಿಶೇಷತೆಗಳನ್ನು ಕುರಿತು ಬರೆಯಿರಿ.

## ವಿಭಾಗ – ಸಿ

ಈ ಕೆಳಗಿನವುಗಳಲ್ಲಿ **ಯಾವುದಾದರೂ ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **3x10=30**

**8.** ಪ್ರಾಚೀನ ಕನ್ನಡ ಸಾಹಿತ್ಯದ ಪ್ರೇರಣೆ, ಪ್ರಭಾವ ಮತ್ತು ಧೋರಣೆಗಳನ್ನು ಕುರಿತು ಬರೆಯಿರಿ.

**9.** ಕನ್ನಡ ಸಾಹಿತ್ಯದ ಚರಿತ್ರೆಯ ಅಧ್ಯಯನದ ವಿಭಾಗ ಕ್ರಮಗಳನ್ನು ಕುರಿತು ಬರೆಯಿರಿ.

**10.** ವಸ್ತುಕ ಮತ್ತು ವರ್ಣಕ ಕಾವ್ಯ ಪರಂಪರೆಗಳನ್ನು ಕುರಿತು ವಿವರಿಸಿರಿ.

**11.** ವಡ್ಡಾರಾಧನೆ ಕೃತಿಯು ಜೈನಧರ್ಮ ಸಾರುವ ಅಹಿಂಸಾ ತತ್ವವನ್ನು ಪ್ರತಿಪಾದಿಸುತ್ತದೆ ವಿವರಿಸಿರಿ.

**12.** ಪೊನ್ನ ಕವಿಯ ಕಾಲ, ದೇಶ ಮತ್ತು ಕೃತಿಗಳನ್ನು ಕುರಿತು ಬರೆಯಿರಿ.

**- o O o -**